**ಕಲಬುರ್ಗಿಯ ವಿಮಾನ ನಿಲ್ದಾಣದಿಂದ ಬೆಂಗಳೂರು ಹಾಗೂ ತಿರುಪತಿಗೆ ವಿಮಾನಗಳು ಹಾರಾಡುತ್ತಿವೆ. 2021ರಲ್ಲಿ ಏರುಮುಖವಾಗಿದ್ದ ಪ್ರಯಾಣಿಕರ ಸಂಖ್ಯೆ ಈಗ ಇಳಿಕೆಯಾಗಿದೆ.**



ಪೂರ್ವದಲ್ಲಿ ಸದ್ಯದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ವಾರ್ಷಿಕ ದಾಖಲೆಯ 3.3 ಕೋಟಿ ಪ್ರಯಾಣಿಕರನ್ನು ನಿರ್ವಹಿಸಿದೆ. ಕೋವಿಡ್ ನಂತರದಲ್ಲಿ 2022ನೇ ಸಾಲಿನಲ್ಲಿ 3.19 ಕೋಟಿ ಪ್ರಯಾಣಿಕರನ್ನು ನಿರ್ವಹಿಸಿದೆ. 2023ರಲ್ಲಿ ಇದು 4 ಕೋಟಿ ಪ್ರಯಾಣಿಕರನ್ನು ತಲುಪಿದೆ.

ಹೀಗೆ ವರ್ಷದಿಂದ ವರ್ಷಕ್ಕೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತುಂಬಿ ತುಳುಕುತ್ತಿದೆ. 2032–33ರ ಹೊತ್ತಿಗೆ 9ರಿಂದ 10 ಕೋಟಿ ಪ್ರಯಾಣಿಕರನ್ನು ನಿರ್ವಹಿಸುವ ದೊಡ್ಡ ಸವಾಲು ಈ ವಿಮಾನ ನಿಲ್ದಾಣಕ್ಕಿದೆ. ಇದಕ್ಕೆ ಪರ್ಯಾಯವಾಗಿ ಮತ್ತೊಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲೆ ಎತ್ತಲಿದೆ ಎಂಬ ಸುದ್ದಿ ಈಗ ದಟ್ಟವಾಗಿದೆ.

ಬೆಂಗಳೂರು ಮೈಸೂರು ನಡುವೆ, ಚೆನ್ನೈ ಮಾರ್ಗದಲ್ಲಿ ಹೊಸೂರು ಬಳಿ ತಮಿಳುನಾಡು ಸರ್ಕಾರ ಒಂದು ವಿಮಾನ ನಿಲ್ದಾಣ ನಿರ್ಮಿಸುತ್ತಿದೆ ಎಂಬ ದಟ್ಟ ವದಂತಿಯೂ ಈಗ ನಿಜವಾಗಿದೆ. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಜೂನ್ 27ರಂದು ಈ ಕುರಿತು ತಮಿಳುನಾಡು ವಿಧಾನಸಭೆಯಲ್ಲಿ ಪ್ರಸ್ತಾವನೆ ಮಂಡಿಸಿದ್ದಾರೆ. ಹೊಸೂರಿನಲ್ಲಿ 2 ಸಾವಿರ ಎಕರೆ ಜಾಗದಲ್ಲಿ ಈ ವಿಮಾನ ನಿಲ್ದಾಣ ತಲೆ ಎತ್ತಲಿದೆ. ವಾರ್ಷಿಕ 3 ಕೋಟಿ ಪ್ರಯಾಣಿಕರನ್ನು ಇದು ನಿರ್ವಹಿಸಲಿದೆ ಎಂದು ಅವರು ಹೇಳಿದ್ದಾರೆ.

ಇದರೊಂದಿಗೆ ಬೆಂಗಳೂರಿಗೆ ಮತ್ತೊಂದು ಡೊಮೆಸ್ಟಿಕ್ ವಿಮಾನ ನಿಲ್ದಾಣದ ಅಗತ್ಯವಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ. ಈ ಎರಡೂ ವಿಮಾನ ನಿಲ್ದಾಣಗಳು ನಿರ್ಮಾಣವಾದಲ್ಲಿ, ಬೆಂಗಳೂರು ಮೂಲಕ ಪ್ರಯಾಣಿಸುವವರಿಗೆ ಮೂರು ನಿಲ್ದಾಣಗಳ ಆಯ್ಕೆಗಳು ಸಿಗಲಿವೆ.

ಸದ್ಯ ಇರುವ ವಿಮಾನ ನಿಲ್ದಾಣಕ್ಕೆ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣವಾಗಿ ನಿರ್ಮಿಸುವ ಅವಕಾಶವನ್ನು ನಾಗರಿಕ ವಿಮಾನಯಾನ ಸಚಿವಾಲಯ ಹಾಗೂ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅವಕಾಶ ನೀಡಲಿದೆ. ಈ ನಿಟ್ಟಿನಲ್ಲಿ ಸೂಕ್ತ ಜಾಗದ ಹುಡುಕಾಟ ಮಾತ್ರವಲ್ಲ, ಭೂಮಿ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯೂ ಆರಂಭಗೊಂಡಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಇದರ ನಡುವೆ ದುಬೈನಂತೆ, ಬೆಂಗಳೂರನ್ನು ಭಾರತದ ವಿಮಾನ ನಿಲ್ದಾಣಗಳ ತಾಣವನ್ನಾಗಿಸುವ ಯೋಜನೆಯೂ ಸರ್ಕಾರದ ಮುಂದಿದೆ. ಈಗಿರುವ ವಿಮಾನ ನಿಲ್ದಾಣದ ಟರ್ಮಿನಲ್ 2ರ ಕಾರ್ಯಾರಂಭ ಸಂದರ್ಭದಲ್ಲಿ ಗರಿಷ್ಠ 50 ಸಾವಿರ ಉದ್ಯೋಗಗಳು ಇಲ್ಲಿ ರೂಪುಗೊಳ್ಳಬಹುದು



ವಿಮಾನಯಾನ ಈಗ ಮಕ್ಕಳಾಟವಾಗಿ ಉಳಿದಿಲ್ಲ...

ಎಂದು ಅಂದಾಜಿಸಲಾಗಿತ್ತು. ಈಗಾಗಲೇ 38 ಸಾವಿರ ಜನ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂಡಿಗೊ, ಏರ್ ಇಂಡಿಯಾದೊಂದಿಗೆ ವಿಮಾನ ನಿಲ್ದಾಣದ ಅಧಿಕಾರಿಗಳು ಮಾತುಕತೆ ನಡೆಸಿದ್ದು, ಏರ್‌ಪೋರ್ಟ್ ಹಬ್ ಮಾಡುವ ಪ್ರಯತ್ನ ಸಾಗಿದೆ ಎಂದು ವರದಿಯಾಗಿದೆ.

ಪ್ರಯಾಣಿಕರು ಹೊರಡಬೇಕಾದ ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸದ್ಯ ವಿಮಾನಗಳ ಹಾರಾಟ ನಡೆಯುತ್ತಿದೆ. ಆದರೆ ಏರ್‌ಪೋರ್ಟ್ ಹಬ್ ಮಾಡಿದಲ್ಲಿ ಇಡೀ ಜಗತ್ತಿನ ಪ್ರಮುಖ ಸ್ಥಳಗಳಿಗೆ ಬೆಂಗಳೂರು ಮೂಲಕ ನಿಲ್ದಾಣ ಸಂಪರ್ಕ ಕಲ್ಪಿಸುವ ಯೋಜನೆಯೂ ಇದಾಗಿದೆ. ಒಂದೊಮ್ಮೆ ಇದು ಆಗಿದ್ದೇ ಆದಲ್ಲಿ, ಪೂರ್ವ ಹಾಗೂ ಪಶ್ಚಿಮ, ದಕ್ಷಿಣ ಹಾಗೂ ಉತ್ತರದ ನಡುವೆ ಬೆಂಗಳೂರು ಸಂಪರ್ಕ ಕೊಂಡಿಯಂತೆ ಕೆಲಸ ಮಾಡಲಿದೆ. ಬೆಂಗಳೂರಿನಲ್ಲಿ 2ನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸುವ ಉದ್ದೇಶ ಸರ್ಕಾರಕ್ಕಿದೆ ಎಂಬ ಸಚಿವ ಎಂ.ಬಿ. ಪಾಟೀಲ ಅವರ ಮಾತು ಇದಕ್ಕೆ ಈಗ ಪುಷ್ಟಿ ನೀಡಿದೆ. ಹೊಸ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಬೇಕಿರುವ ಜಾಗ ಎಲ್ಲಿದೆ ಎಂಬ ಹುಡುಕಾಟವೂ ಸರ್ಕಾರದ ಕಡೆಯಿಂದ ನಡೆಯುತ್ತಿದೆ ಎನ್ನಲಾಗಿದೆ. ಸುಮಾರು 4 ಸಾವಿರ ಎಕರೆಗಳ ಜಾಗದ ಅವಶ್ಯಕತೆ ಇದೆ, ಇಷ್ಟು ದೊಡ್ಡ ಜಾಗಕ್ಕಾಗಿ ಬೆಂಗಳೂರು–ಮೈಸೂರು ನಡುವೆ ರಾಮನಗರಲ್ಲಿದೆಯೋ ಅಥವಾ ತುಮಕೂರು ಮತ್ತು ಚಿತ್ರದುರ್ಗ ನಡುವೆ ಶಿರಾದಲ್ಲಿ ಸಿಗುತ್ತದೋ ಎಂಬ ಹುಡುಕಾಟ ನಡೆದಿದೆ.

ಈಗಾಗಲೇ ತುಮಕೂರು, ಶಿರಾ, ಮಧುಗಿರಿ ಹಾಗೂ ಕೊರಟಗೆರೆ ತಾಲ್ಲೂಕುಗಳನ್ನು ಒಳಗೊಂಡ ಭಾಗದಲ್ಲಿ ಎಂಟು ಸಾವಿರ ಎಕರೆ ಜಾಗವನ್ನು ಸರ್ಕಾರ ಗುರುತಿಸಿದೆ. ವಿಮಾನ ನಿಲ್ದಾಣದ ಜತೆಗೆ, ಚೆನ್ನೈ–ಬೆಂಗಳೂರು–ಮುಂಬೈ ಕೈಗಾರಿಕಾ